ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೫ನೇ ಮಾರ್ಚ ೧೯೮೭ ಚೈತ್ರ ೪ ೧೯೦೯, ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೧೦ ಗಂಟೆಗೆ ಸಮಾವೇಶಗೊಂಡಿತು

(ಅಧ್ಯಕ್ಷರು, (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು)

ಸಭೆಯು ಮುಂದಿಡಲಾದ ಕಾಗದಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿ) ಅವರ ಪರವಾಗಿ.—

"೧೯೫೭ನೇ ಇಸವಿಯ ಕರ್ನಾಟಕ ಮೂರಾಟ ತೆರಿಗೆ ಶಾಸನದ ೫೯ನೇ ಕಲಮಿನ ಮೇರೆಗೆ ದಿನಾಂಕ ೧೯ನೇ ಫೆಬ್ರವರಿ ೧೯೮೭ರಂದು ಎಫ್‌ಡಿ ೧೧೭ ಸಿಎಸ್‌ಎಲ್ ೮೬ನೇ ಸಂಖ್ಯೆಯಲ್ಲಿ ಹೊರಡಿಸಲಾದ ತಿದ್ದೋಲೆಯನ್ನು ಸಭೆಯು ಮುಂದಿಡುತ್ತೇನೆ"

ಅಧ್ಯಕ್ಷರು.—ಸಭೆಯು ಮುಂದಿಡಲಾಗಿದೆ.

ಶ್ರೀ ಎ.ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಶ್ರೀ ಜೆ. ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) ಅವರ ಪರವಾಗಿ.—

"೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ

ಅ) ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ ಇವರ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಕಂಪನಿಯ ಕಾರ್ಯಗಳ ಬಗ್ಗೆ ಟಿಪ್ಪಣಿಯೊಂದಿಗೆ ಸಭೆಯು ಮುಂದಿಡುತ್ತೇನೆ.

ಆ) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಇವರ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಮುಂದಿಡುತ್ತೇನೆ.

೧೯೫೬ನೇ ಇಸವಿಯ ಕರ್ನಾಟಕ ಖಾದೀ ಗ್ರಾಮೋದ್ಯೋಗ ಶಾಸನದ ೨೬ನೇ ಕಲಮಿನ ಮೇರೆಗೆ

ಇ) ಕರ್ನಾಟಕ ರಾಜ್ಯ ಖಾದೀ ಗ್ರಾಮೋದ್ಯೋಗ ಮಂಡಳಿಯವರ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿ ಹಾಗೂ ೧೯೮೬-೮೭ನೇ ಸಾಲಿನ ಲೆಕ್ಕಪತ್ರ ತನಿಖಾ ವರದಿಯನ್ನು ಸಭೆಯು ಮುಂದಿಡುತ್ತೇನೆ.

೧೯೪೮ನೇ ಇಸವಿಯ ವಿದ್ಯುಚ್ಛಕ್ತಿ (ಪೂರೈಕೆ) ಶಾಸನದ ೬೧ (೩) ನೇ ಕಲಮಿನ ಮೇರೆಗೆ

ಈ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ೧೯೮೬-೮೮ನೇ ಸಾಲಿನ ಹಣಕಾಸು ವಿವರಣೆ ಹಾಗೂ ೧೯೮೬-೮೭ನೇ ಸಾಲಿನ ಪರಿಷ್ಕೃತ ವಿವರಣೆಯನ್ನು ಸಭೆಯು ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).–ಅಧ್ಯಕ್ಷರೇ, ೧೯೮೧ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಳಿ ಶಾಸನದ ೨೨ (೪)ನೇ ಕಲಮಿನ ಮೇರೆಗೆ–

ಕರ್ನಾಟಕ ಕಾನೂನು ನೆರವು ಮಂಡಳಿಯ ೧೯೮೪–೮೫ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಹಾಗೂ ಮಿೂನುಗಾರಿಕೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧(ಎ) ಕಲಮಿನ ಮೇರೆಗೆ ಕರ್ನಾಟಕ ಮಿೂನುಗಾರಿಕಾ ಅಭಿವೃದ್ಧಿ ನಿಗಮದವರ ೧೯೮೬–೮೭ನೇ ಸಾಲಿನ ಪ್ರಗತಿ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).–ಮಾನ್ಯ ಅಧ್ಯಕ್ಷರೇ, ೧೯೫೦ನೇ ಇಸವಿಯ ಸಾರಿಗೆ ನಿಗಮದ ಶಾಸನದ ೩೫ (೩) ನೇ ಕಲಮಿನ ಮೇರೆಗೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು —ಸಭೆಯ ಮುಂದಿಡಲಾಗಿದೆ. ಇನ್ನು ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.–ಮಾನ್ಯ ಅಧ್ಯಕ್ಷರೇ, ಶ್ರೀ ಕೆ. ಕುಶಾಲ ಅವರ ಪರವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಪಂಗಡಕ್ಕೆ ಕೋಟೆಗಾರ, ಸೇರೆಗಾರ್ ಹಾಗೂ ಇತರ ಪಂಗಡಗಳನ್ನು ಸೇರಿಸಿರುವುದರಿಂದ ಅನ್ಯಾಯವಾಗಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ. ಹಾಗೆಯೇ ಶ್ರೀ ಬಿ. ಸ್ವಾಮಿರಾವ್ ಅವರ ಪರವಾಗಿ, ಶಿವಮೊಗ್ಗ ತಾಲ್ಲೂಕಿನ ಶೆಟ್ಟಿಹಳ್ಳಿ-ಪುರದಾಳು ಗ್ರಾಮದ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಶ್ರೀ ಜಿ. ಎಸ್. ಆಚಾರ್ ಅವರ ಪರವಾಗಿ ಕೆಳಕಂಡ ಅರ್ಜಿಗಳನ್ನು ಒಪ್ಪಿಸುತ್ತೇನೆ

ಅ) ಕುಂದಾಪುರ ತಾಲ್ಲೂಕಿನ ಖಾಸಗಿ ಸ್ಥಳಗಳಲ್ಲಿ ಮರ ಕಡಿಯುವ ಕುರಿತಂ ಸರ್ಕಾರವು ವಿಧಿಸಿದ ಷರತ್ತುಗಳ ಪರಿಷ್ಕಾರದ ಬಗ್ಗೆ

ಆ) ಕುಂದಾಪುರ ತಾಲ್ಲೂಕಿನ ಕಾಲ್ತೋಡು ಹಾಗೂ ಹೆರಂಜ ಗ್ರಾಮಗಳ ಮಧ್ಯದಲ್ಲಿ ಮೊಟ್ಟಿನ ಹೊಳೆ ಎಂಬಲ್ಲಿ ಕಾಲುಸಂಕದ ಬದಲಿಗೆ ಸೇತುವೆ ನಿರ್ಮಿಸುವ ಬಗ್ಗೆ.

ಅಧ್ಯಕ್ಷರು.–ಅರ್ಜಿಗಳನ್ನು ಒಪ್ಪಿಸಲಾಗಿದೆ. ಇನ್ನು ಮುಂದೆ ಬೇಡಿಕೆಗಳ ಮೇಲೆ ಚರ್ಚೆ.

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

†**ಶ್ರೀಮತಿ ಕೆ. ಎಸ್.** ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರ ತಕ್ಕ ಎಲ್ಲಾ ಬೇಡಿಕೆಗಳ ಮೇಲೆ ನಾನು ಹಲವಾರು ಸೂಚನೆಗಳನ್ನು ಮತ್ತು ಅವುಗಳ ವಿಷಯದಲ್ಲಿ ನಾಲ್ಕಾರು ಮಾತುಗಳನ್ನು ಆಡಲಿಚ್ಚಿಸುತ್ತೇನೆ. ಅಧ್ಯಕ್ಷರೇ, ನಾನು ಮಾತನಾಡುವಾಗ ನನ್ನ ಆದ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.